ಬಗರ್ ಹುಕುಂ ಸಾಗುವಳಿ

೮೬೫. ಶ್ರೀಮತಿ ಮೋಟಮ್ಮ (ಮೂಡಗೆರೆ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಗರ್ ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು ;

ಆ) ಅವರು ಸಾಗುವಳಿ ಮಾಡುತ್ತಿರುವ ಭೂಮಿಯ ವಿಸ್ತೀರ್ಣವೆಷ್ಟು ;

ಇ) ಆ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರೆಷ್ಟು ಹಾಗೂ ಅವರ ಸಾಗುವಳಿ ಭೂಮಿಯ ವಿಸ್ತೀರ್ಣವೆಷ್ಟು (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ, ದಿನಾಂಕ. ೧–೧–೮೮ ರವರೆಗಿನ ಬಗರ್ ಹುಕುಂ ಸಾಗುವಳಿದಾರರ ಸಂಖ್ಯೆ. ೧೮,೨೯೧.

ಆ) ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ವಿಸ್ತೀರ್ಣ ೫೨,೫೯೨ ಎಕರೆ ೩೩ ಗುಂಟೆ.

ಇ)

	ಸಂಖ್ಯೆ	ವಿಸ್ತೀರ್ಣ
	ಎಕರೆ	ಗುಂಟೆ
ವ್ಯವಸಾಯ	೪೪೩೨	೧೦,೮೦೫–೦೫
ತೋಟ	೪೬೧	೧,೦೫೮–೨೪
ಒಟ್ಟು	೪೮೯೩	೧೧,೮೬೩–೨೯

ರಾಜ್ಯದಲ್ಲಿ ವಿಚಾರಣಾ ಆಯೋಗಗಳ ನೇಮಕದ ಬಗ್ಗೆ

೧೫೧. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭ರ ಏಪ್ರಿಲ್ ೧ ರಿಂದ ೩೧ ಜುಲೈ ೧೯೮೯ರ ವರೆಗೆ ರಾಜ್ಯದಲ್ಲಿ ವಿಚಾರಣಾ ಆಯೋಗದ ಕಾನೂನಿನನ್ವಯ ಎಷ್ಟು ವಿಚಾರಣಾ ಆಯೋಗಗಳನ್ನು ನೇಮಿಸಲಾಗಿದೆ ;

ಆ) ಮೇಲ್ಕಂಡ ವಿಚಾರಣಾ ಆಯೋಗಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು ;

ಇ) ಮೇಲ್ಕಂಡ ಅವಧಿಯಲ್ಲಿ ರಚಿತಗೊಂಡ ಇನ್ನು ಎಷ್ಟು ವಿಚಾರಣಾ ಆಯೋಗಗಳು ತಮ್ಮ ವರದಿಯನ್ನು ಸಲ್ಲಿಸಬೇಕಾಗಿದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಏಳು ವಿಚಾರಣಾ ಆಯೋಗಗಳನ್ನು ನೇಮಿಸಲಾಗಿದೆ.

ಆ) ಸುಮಾರು ೧೪,೫೦,೦೦೦ ರೂ:ಗಳು.

ಇ) ನಾಲ್ಕು

ದಕ್ಷಿಣ ಕನ್ನಡದ ಬೀಡಿ ಉದ್ದಿಮೆ ಮತ್ತು ಕಾರ್ಮಿಕರ ಬವಣೆ

೪೦೪. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಮಾಲೀಕರೆಷ್ಟು, ಬೀಡಿ ಗುತ್ತಿಗೆದಾರರು ಎಷ್ಟು, ಬೀಡಿ ಕಾರ್ಮಿಕರೆಷ್ಟು ;

ಅ) ಇಲ್ಲಿನ ಬೀಡಿ ಕಾರ್ಮಿಕರಿಗೆ ಒಂದು ವರ್ಷದಿಂದ ವಾರಕ್ಕೆ ಎರಡು ಕೆಲಸವೂ ಇಲ್ಲದೆ ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೇ ;

ಇ) ಬೀಡಿ ಎಲೆ ಮಧ್ಯಪ್ರದೇಶದಿಂದ ಬಾರದೆ ಇರುವ ಕಾರಣ ಮಾಲೀಕರು ವಾರಕ್ಕೆ ಪೂರ್ಣ ಕೆಲಸ ಮಾಡುತ್ತಿಲ್ಲ ಎಂಬುದು ನಿಜವೇ ;

ಈ) ಈ ಸಂಕಷ್ಟದಿಂದ ಬೀಡಿ ಕಾರ್ಮಿಕರನ್ನು ಪಾರು ಮಾಡಲು ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಬೀಡಿ ಉದ್ದಿಮೆ (ಮಾಲೀಕರು) ೧೫೮೦. ಬೀಡಿ ಕಾರ್ಮಿಕರು ಮೂರರಿಂದ ಮೂರುವರೆ ಲಕ್ಷ ಬೀಡಿ ಗುತ್ತಿಗೆದಾರರು—ಇದರ ಬಗ್ಗೆ ಖಚಿತವಾದ ಮಾಹಿತಿ ಲಭ್ಯವಿಲ್ಲ.

ಆ) ಹೌದು.

ಇ) ಹೌದು.

ಈ) ಈ ಸಮಸ್ಯೆಯನ್ನು ಸರ್ಕಾರದ ಮಟ್ಟದಲ್ಲಿ ಬಗೆಹರಿಸಲು ಸಾಧ್ಯವಾಗುವುದಿಲ್ಲ. ಕಾರಣ, ಇದು ವಾಣಿಜ್ಯ ವಿಷಯವಾಗುತ್ತದೆ.

ಕರ್ನಾಟಕದಲ್ಲಿ ಹೊರ ರಾಜ್ಯದವರು ಭೂಮಿ, ನಿವೇಶನ ಪಡೆಯಂವುದನ್ನು ನಿಷೇಧಿಸುವ ಕುರಿತು

೧೭೦. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಬೇರೆ ರಾಜ್ಯದವರು ಬೇರೆ ಭಾಷೆಯವರು ಅಧಿಕವಾಗಿ ಕರ್ನಾಟಕದಲ್ಲಿ ಜಮೀನು ನಿವೇಶನಗಳನ್ನು ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಕರ್ನಾಟಕದಲ್ಲಿ ಬೇರೆ ರಾಜ್ಯದವರು, ಬೇರೆ ಭಾಷೆಯವರು ನಿವೇಶನ, ಜಮೀನುಗಳನ್ನು ಪಡೆಯುತ್ತಿರುವುದನ್ನು ನಿಷೇದಿಸಲು ಕಾರಣವೇನು ;

ಇ) ಮಂಗಳೂರು, ಮೈಸೂರು ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಕನ್ನಡೇತರರಿಗೆ ನಿವೇಶನಗಳನ್ನು ನೀಡದಂತೆ ಕಾನೂನನ್ನು ಮಾಡಲಾಗುವುದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ನಿಷೇಧಿಸಿರುವುದಿಲ್ಲ.

ಇ) ಇದಕ್ಕೆ ರಾಜ್ಯಾಂಗದಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ ಅಧಿವಾಸ ನಿರ್ಬಂಧಗಳು ಮುಂದುವರಿಯುತ್ತವೆ.

ರಾಜ್ಯ ಸರ್ಕಾರದ ಅಧೀನದಲ್ಲಿರುವ ಮಂಡಲಿ ಕಾರ್ಪೊರೇಷನ್‌ಗಳ ಬಗ್ಗೆ

೧೭೧. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಮಂಡಳಿ/ಕಾರ್ಪೊರೇಷನ್‌ಗಳು ಎಷ್ಟು ;

ಆ) ಇವುಗಳಲ್ಲಿ ಯಾವ ಯಾವ ಮಂಡಳಿಗಳನ್ನು ಮತ್ತು ಕಾರ್ಪೊರೇಷನ್‌ಗಳನ್ನು ರದ್ದು ಮಾಡಲು ಸರ್ಕಾರವು ಉದ್ದೇಶಿಸಿದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಸರ್ಕಾರದ ಅಧೀನದಲ್ಲಿ ೬೧ ಸಾರ್ವಜನಿಕ ಉದ್ದಿಮೆಗಳು ಇರುತ್ತವೆ. ಉಳಿದ ಮಂಡಳಿಗಳು ಮತ್ತು ಕಾರ್ಪೊರೇಷನ್‌ಗಳ ಬಗ್ಗೆ ಮಾಹಿತಿಯನ್ನು ಪಡೆದ ನಂತರ ಮಂಡಿಸಲಾಗುವುದು.

ಆ) ಯಾವುದೂ ಇಲ್ಲ.